**ದಿನಾಂಕ 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಐಟಂ ನಂ 5 ರ ಪಹಣಿ ಪತ್ರಿಕೆ ನನ್ನ ಅಣ್ಣ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ . ಪಹಣಿ ಪತ್ರಿಕೆಯಲ್ಲಿ ಇರುವ ನಮೂದುಗಳನ್ನು ನಾನು ಒಪ್ಪುತ್ತೇನೆ. ಕ್ರಯ ಖರೀದಿಯ ಸಮಯದಲ್ಲಿ ಐಟಂ ನಂ 5 ಆಸ್ತಿ ಕೃಷಿ ಜಮೀನು ಆಗಿತ್ತು ಎಂದರೆ ಸಾಕ್ಷಿ ಆ ಸಮಯದಲ್ಲಿ ಕೃಷಿ ಮಾಡುತ್ತಿರಲಿಲ್ಲ ಆದರೇ ದಾಖಲೆ ಪ್ರಕಾರ ಕೃಷಿ ಜಮೀನು ಆಗಿತ್ತು. ಒಂದನೇ ಪ್ರತಿವಾದಿ ನನ್ನ ಅಣ್ಣ ಐಟಂ ನಂ 5 ನ್ನು ಖರೀದಿಸಿದ ನಂತರ ಕೃಷಿಯೇತರ ಜಮೀನನ್ನಾಗಿ ಪರಿವರ್ತಿಸಿದ್ದಾರೆ ಎಂದರೆ ಸರಿ. ಈ ಬಗ್ಗೆ ಸಾಕ್ಷಿಗೆ Conversion order ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ 16 ಎಂದು ಗುರುತಿಸಲಾಯಿತು . ಪರಿವರ್ತನೆ ಬಗ್ಗೆ ರೂ 1,63,350/- ಮತ್ತು ಸಬ್ ಡಿವಿಶನ್ ಬಗ್ಗೆ ರೂ 55/- ಒಂದನೇ ಪ್ರತಿವಾದಿ ಹಣ ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿ ಎಲ್ಲರ ಪರವಾಗಿ ಮಾಡಿದಾರೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಅದನ್ನು ನಿಡಿ 17 ಮತ್ತು 18 ಎಂದು ಗುರುತಿಸಲಾಯಿತು . ಭೂ ಕಂದಾಯ ಎಷ್ಟು ಬರುತಿತ್ತು ಎಂದು ನನಗೆ ಗೊತ್ತಿಲ್ಲ ಭೂ ಕಂದಾಯವನ್ನು ನನ್ನ ಅಣ್ಣ ಪಾವತಿಸುತಿದ್ದರು ಎಂದರೆ ಸಾಕ್ಷಿ ಕುಟುಂಬದ ಹಣದಿಂದ ಕುಟುಂಬದ ಪರವಾಗಿ ಪಾವತಿಸುತಿದ್ದರು ಎಂದು ತಿಳಿಸಿರುತ್ತಾರೆ . ಸಾಕ್ಷಿಗೆ ಒಂದು ಕಂದಾಯ ರಸೀದಿಯನ್ನುತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಹೌದು ಎಂದು ಒಪ್ಪಿಕೊಂಡಿದ್ದು ಅದನ್ನು ನಿಡಿ 19 ಎಂದು ಗುರುತಿಸಲಾಯಿತು . ಭೂ ಪರಿವರ್ತನೆಗೊಂಡ ನಂತರ ಬಿಬಿಎಂಪಿ ಖಾತೆ ಕೂಡ ನನ್ನ ಅಣ್ಣನ ಹೆಸರಿನಲ್ಲಿ ಆಗಿದೆ ಎಂದರೆ ನೆನಪಿಲ್ಲ . ಬಿಬಿಎಂಪಿ ತೆರಿಗೆಯನ್ನು ಕೂಡ

ಒಂದನೇ ಪ್ರತಿವಾದಿ 2008-09 ರಿಂದ ಇಲ್ಲಿಯವರೆಗೆ ಅವರ ಹೆಸರಿನಲ್ಲಿ ಪಾವತಿಸುತಿದ್ದಾರೆ ಎಂದರೆ ಮನೆಯ ಕುಟುಂಬದ ಹಣದಿಂದ ಪಾವತಿಸುತಿದ್ದಾರೆ ಎಂದು ಸಾಕ್ಷಿ ತಿಳಿಸಿರುತಾರೆ . ಒಂದು ವರ್ಷಕ್ಕೆ ಎಷ್ಟು ತೆರಿಗೆ ಎಂದು ನನಗೆ ನೆನಪಿಲ್ಲ . ಒಂದು ವರ್ಷಕ್ಕೆ ರೂ 65000/- ತೆರಿಗೆಯನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ಕಟ್ಟುತಿದ್ದಾರೆ ಎಂದು ಸಾಕ್ಷಿಗೆ ಆ ಬಗ್ಗೆ ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿ ದಾಖಲೆ ನೋಡಿ ಹೌದು ಎಂದು ಒಪ್ಪಿಕೊಂಡಿದ್ದು ಹಾಗೂ ಮುಂದುವರಿದು ಸದ್ರಿ ಹಣವನ್ನು ಕುಟುಂಬದ ಪರವಾಗಿ ಕಟ್ಟಿದ್ದಾರೆ ಎಂದುತಿಳಿಸಿರುತ್ತಾರೆ. ಸದ್ರಿ ದಾಖಲೆಗಳನ್ನು ಒಟ್ಟಿಗೆ (16 ಕಂದಾಯ ರಸೀದಿಗಳು) ನಿಡಿ-20 ಎಂದು ಗುರುತಿಸಲಾಯಿತು. ಐಟಂ ನಂ 5 ರ ಸ್ವತ್ತಿನ ಎಲ್ಲಾ ದಾಖಲಾತಿಗಳು ಒಂದನೇ ಪ್ರತಿವಾದಿಯಾದ ನನ್ನ ಅಣ್ಣನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಹೆಸರಿಗೆ ಮಾಡಿಕೊಡಲಿಲ್ಲ ಎಂದು ತಿಳಿಸಿರುತ್ತಾರೆ. ಐಟಂ ನಂ 5 ರ ಸ್ವತ್ತಿಗೆ ಸಂಬಂಧಪಟ್ಟಂತೆ ಕಂದಾಯವನ್ನು ಕೂಡ ಅವರ ಬ್ಯಾಂಕ್ ಖಾತೆಯ ಹಣದಿಂದ ಕಟ್ಟುತಿದ್ದಾರೆ ಎಂದರೆ ಸಾಕ್ಷಿ ಅದು ಕುಟುಂಬದ ಹಣ ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ಎಲ್ಲವನ್ನು ನಿರ್ವಹಣೆ ಮಾಡುತಿದ್ದರು ಎಂದು ತಿಳಿಸಿರುತ್ತಾರೆ . ದಾವೆ ನಡೆಸಲು 2020 ರಿಂದ ಕೂಡ ಕುಟುಬಂದ ಹಣವನ್ನೇ ಉಪಯೋಗಿಸಲಾಗುತಿದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹಣ ಸಂಪೂರ್ಣವಾಗಿ ಒಂದನೇ ಪ್ರತಿವಾದಿಯಾದ ನನ್ನ ಅಣ್ಣನ ಬಳಿ ಇದೆ ಎಂದು ತಿಳಿಸಿರುತ್ತಾರೆ ಮತ್ತು ಅದು ಕುಟುಂಬದ ಹಣ ಎಂದು ತಿಳಿಸಿರುತ್ತಾರೆ. ಒಂದನೇ ಪ್ರತಿವಾದಿಯಾದ ನನ್ನ ಅಣ್ಣನ ಬಳಿ ಯಾವುದೇ ವೈಯಕ್ತಿಕ ಹಣ ಇರಲಿಲ್ಲ . ಸಾಕ್ಷಿ ಮುಂದುವರಿದು ಕುಟುಂಬದ ಹಣ ಬಿಟ್ಟರೇ ವೈಯಕ್ತಿಕ ಹಣ ಇರಲಿಲ್ಲ ಎಂದು ತಿಳಿಸಿರುತ್ತಾರೆ. ನಿಮ್ಮ ಬಳಿ ಕೂಡ ವೈಯಕ್ತಿಕ ಹಣ ಇಲ್ಲ ಎಂದು ಹೇಳಿತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ರವರೆಗೆ ನನ್ನ ಬಳಿ ವೈಯಕ್ತಿಕ ಹಣ ಇರಲಿಲ್ಲ ಎಂದು ತಿಳಿಸಿರುತ್ತಾರೆ. 2020 ರ ನಂತರ ನಿಮ್ಮ ಬಳಿ ಇರುವ ಹಣ ವೈಯಕ್ತಿಕ

ಹಣ ಎಂದು ಹೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಸ್ವಲ್ಪ ವ್ಯವಹಾರ ಮಾಡಿದ್ದೇನೆ ಎಂದು ತಿಳಿಸಿರುತ್ತಾರೆ. 2020 ರ ನಂತರ ನನ್ನ ಬಳಿ ಕುಟುಂಬದ ಹಣ ಎಂದು ಹೇಳುವ ಠೇವಣಿ ಇರುವುದಿಲ್ಲ . ಎಲ್ ಐ ಸಿ ಯಿಂದ ಹಣ ಬಂದಿತ್ತು ಅದು ಸಾಲಕ್ಕೆ ಹೋಗಿದೆ ಎಂದು ತಿಳಿಸಿರುತ್ತಾರೆ . ಸಾಲವನ್ನು ಯಾರು ಮಾಡಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2020 ರ ಹಿಂದೆ ಮಾಡಿದ ಸಾಲ ಇತ್ತು ಅದಕ್ಕೆ ಹೋಗಿದೆ . ಯಾರ ಸಾಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೈ ಸಾಲ ಎಂದು ತಿಳಿಸಿರುತ್ತಾರೆ . ಮುಂದುವರಿದು 2020 ರನಂತರ grocery shop ಗೆ ಕೊಡಬೇಕಾದ ಹಣ ಬಾಕಿ ಇತ್ತು ಅದನ್ನು ತೀರಿಸಿದ್ದೇನೆ ಎಂದು ತಿಳಿಸಿರುತ್ತಾರೆ. 2020 ರನಂತರ ನಾನು ಒಮ್ಮೆ ಮಾತ್ರ ಆದಾಯ ತೆರಿಗೆ ಇಲಾಖೆಗೆ ರಿಟನ್ಸ್ ಸಲ್ಲಿಸಿರುತ್ತೇನೆ. ಸದ್ರಿ ರಿಟನ್ಸ್ ನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಬಹುದು. ನಾನು 2021-22 ರಂದು ರಿಟನ್ಸ್ ಸಲ್ಲಿಸಿರಬಹುದು ತದನಂತರ ಇಲ್ಲಿವರೆಗೆ ನಾನು ರಿಟನ್ಸ್ ಸಲ್ಲಿಸಿಲ್ಲ. ಆದಾಯ ತೆರಿಗೆ ಇಲಾಖೆಗೆ ಆದಾಯ ಇಲ್ಲ ಎಂದು ರಿಟನ್ಸ್ ಸಲ್ಲಿಸಿಲ್ಲವಾ ಅಥವಾ ಆದಾಯ ಇದ್ದರೂ ಕೂಡ ಸಲ್ಲಿಸಿಲ್ಲವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಈಗ ನಾನು ಲೆಕ್ಕ ಮಾಡಿ ಸಲ್ಲಿಸುತ್ತೇನೆ ಎಂದು ತಿಳಿಸಿರುತ್ತೇನೆ . ನಾನು ಸಲ್ಲಿಸಿರುವ ರಿಟನ್ಸ್ ನಲ್ಲಿ ಐಟಂ ನಂ 5 ರ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದು ಕಾಣಿಸಿಲ್ಲ . ಸಾಕ್ಷಿ ಮುಂದುವರಿದು ನಮ್ಮ CA ಅದನ್ನು ಕಾಣಿಸುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದರು . ಐಟಂ ನಂ 5 ರ ಸ್ವತ್ತನ್ನು ಖರೀದಿಸಲು ಉಪಯೋಗಿಸಿದ ಹಣ ಕುಟುಂಬದ ಹಣ ಮತ್ತು ಅದರ ಆದಾಯ ಹಾಗೂ ಖರ್ಚುಗಳು ಕುಟುಂಬದ ಹಣ ಎಂದು ರಿಟನ್ಸ್ ನಲ್ಲಿ ಹೇಳಿಲ್ಲ ಕಾರಣ ದಾವೆ ಬಾಕಿ ಇರುವುದರಿಂದ ಆ ರೀತಿ ಹೇಳುವ ಅವಶ್ಯಕತೆ ಇಲ್ಲ ಎಂದು ನಮ್ಮ CA ಹೇಳಿರುತಾರೆ . ಈ ದಾವೆ ವಿಚಾರಣೆಗೆ ಬಾಕಿ ಇದೆ ಎಂದು ನಾನು ರಿಟನ್ಸ್ ನಲ್ಲಿ ಕಾಣಿಸಿಲ್ಲ . ದಾವೆಯಲ್ಲಿ ಕಾಣಿಸಿರುವ ಸ್ವತ್ತುಗಳಿಗೆ ಸಂಬಂದಪಟ್ಟಂತೆ ನಾನು ರಿಟನ್ಸ್ ನಲ್ಲಿ ಕುಟುಂಬದ ಆಸ್ತಿಗಳು ಎಂದು ಕಾಣಿಸಿಲ್ಲ ಕಾರಣ 2020 ರವರೆಗೆ ನನ್ನ ಐಟಿ ರಿಟನ್ಸ್ ನ್ನು ಕೂಡ ಒಂದನೇ

ಪ್ರತಿವಾದಿ ಸಲ್ಲಿಸುತ್ತಿದ್ದರು ಅವರು ಕುಟುಂಬದ ಆಸ್ತಿಗಳು ಎಂದು ಕಾಣಿಸಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . 2020 ರ ನಂತರ ನಾನು ಸಲ್ಲಿಸಿದ ರಿಟನ್ಸ್ ನಲ್ಲೂ ಕೂಡ ಕಾಣಿಸಿಲ್ಲ ಕಾರಣ ದಾವೆ ಬಾಕಿ ಇರುವುದರಿಂದ ನಾನು ಆ ರೀತಿ  ಕಾಣಿಸಿಲ್ಲ ಮತ್ತು ನಮ್ಮ CA ಕಾಣಿಸುವ ಅವಶ್ಯಕತೆ ಇಲ್ಲ ಎಂದು ತಿಳಿಸಿರುತ್ತಾರೆ .  ನಿಮ್ಮ  ಖಾತೆ ಇರುವ ಆ್ಯಕ್ಸಿಸ್ ಬ್ಯಾಂಕ್ , ಕೆನರಾ ಬ್ಯಾಂಕ್ ಗಳ ಸ್ಟೇಟ್‌ಮೆಂಟ್ ಗಳನ್ನು ಹಾಜರುಪಡಿಸುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ  ನಾನು ಇನ್ನೂ ಸ್ಟೇಟ್ ಮೆಂಟ್ ತೆಗೆದುಕೊಂಡಿಲ್ಲ ಎಂದು ತಿಳಿಸಿರುತ್ತಾರೆ. ನನ್ನ ಖಾತೆಯ ಸ್ಟೇಟ್‌ಮೆಂಟ್ ಹಾಜರುಪಡಿಸಲು ಸಿದ್ಧನಿದ್ದೇನೆ. ನಾನು 5 ದಿನ ಬಿಟ್ಟು ನನ್ನ ಸ್ಟೇಟ್‌ಮೆಂಟ್ ಹಾಜರುಪಡಿಸುತ್ತೇನೆ . ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಕಾಯ್ದೆ 79 ಎ ಮತ್ತು ಬಿ ಅಡಿಯಲ್ಲಿ ಐಟಂ ನಂ 5 ರ ಸ್ವತ್ತಿಗೆ  ಸಂಬಂದಪಟ್ಟಂತೆ Assistant Commissioner ರವರು ಒಂದನೇ ಪ್ರತಿವಾದಿಗೆ ನೋಟಿಸು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.   Assistant Commissioner ರವರು ವಿಚಾರಣೆ ಮಾಡಿ ಸ್ವತ್ತನ್ನು ಖರೀದಿಸಲು ಕೃಷಿ ಆದಾಯದಿಂದ ಖರೀದಿಸಿದ ಸ್ವತ್ತೋ ಅಥವಾ ವ್ಯಕ್ತಿಯ ವೈಯಕ್ತಿಕ ಆದಾಯಂದ ಖರೀದಿಸಿದ ಸ್ವತ್ತು ಎಂದು ತೀರ್ಮಾನಿಸಿ ಪ್ರಕರಣ ಕೈ ಬಿಟ್ಟಿರುತ್ತಾರೆ ಎಂದರೆ  ನನಗೆ ಗೊತ್ತಿಲ್ಲ . Betterment fee ರೂ 63 ಲಕ್ಷದ 9 ಸಾವಿರದ 87 ರೂಪಾಯಿ ಕಟ್ಟಬೇಕು ಎಂದು ನೋಟಿಸು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಲಯದಲ್ಲಿ ಒಂದನೇ ಪ್ರತಿವಾದಿ Writ Petition ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರಿದ  ಪಾಟೀ ಸವಾಲಗೆ ಕಾಲವಕಾಶ ಕೋರಿದ್ದು , ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಒ.ಎಸ್.  - 34/2020

ಪಿ.ಡಬ್ಲ್ಯು - 01

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.